# ಕಲ್ಪನೆ



ಕಾರ್ಮಿಕರು ಒಟ್ಟುಗೂಡಿ ಕೆಲಸ ಮಾಡುತ್ತಿರುವ ಈ ಛಾಯಾಚಿತ್ರದಲ್ಲಿರುವುದು ನಾಲ್ಕು ಆಯಾಮಗಳಷ್ಟೇ ಅಲ್ಲ; ಐದನೇ ಆಯಾಮವೂ ಮತ್ತೊಂದು ಬದಿಯಲ್ಲಿ ಇಣುಕುತ್ತಿದೆ. ನಿರ್ದಿಷ್ಟ ಗುರಿಗಾಗಿ ಕೈಜೋಡಿಸಿರುವ ಕಾರ್ಮಿಕರ ಕಾಯಕ ಸಹಕಾರ ತತ್ವವನ್ನೂ ಉಸುರುವಂತಿದೆ. ಶ್ರಮ, ಸಹಕಾರ, ಗುರಿಸಾಧನೆಯ ಸಮೀಕರಣದಂತಿರುವ ಈ ಚಿತ್ರಪಟದಲ್ಲಿನ ಕಾಣದ ಮುಖಗಳು ನೂರಾರು ಅವ್ಯಕ್ತ ಕಥೆಗಳನ್ನು ತಮ್ಮೊಳಗೆ ಹುದುಗಿಸಿಟ್ಟುಕೊಂಡಿರಬಹುದು. ಶ್ರಮಕಾವ್ಯದ ಅಭಿವ್ಯಕ್ತಿಯಂತಿರುವ ಈ ಚಿತ್ರಪಟ ನಿಮ್ಮಲ್ಲಿ ಮೂಡಿಸಿದ ಬಿಂಬಗಳೇನು? ಆ ಭಾವಬಿಂಬಗಳನ್ನು ಕಾವ್ಯದ ಚೌಕಟ್ಟಿನಲ್ಲಿರಿಸಿ ನಮಗೆ ಕಳಿಸಿಕೊಡಿ.

ನಿಮ್ಮ ಕಲ್ಪನೆಯ ಕವಿತೆ ನಮಗೆ ತಲುಪಲು ಕೊನೆಯ ದಿನ ನವೆಂಬರ್ 15.

ಚಿತ್ರ: ವಾಸುದೇವ ಶರ್ಮಾ ಎನ್.ವಿ.

---

ವಿಳಾಸ: ಕಲ್ಪನೆ ವಿಭಾಗ, ‘ಮಯೂರ’
ನಂ 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560 001
ಇ–ಮೇಲ್: editormy@mayura.co.in